**ದಿನಾಂಕಃ 24.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಎಲ್ ವಕೀಲರಿಂದಃ**

ಈ ದಿನ ಕೆಲವೊಂದು ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

| | |
|---|---|
| 1. | ಖಾತಾ ನಂ 215ರ ಆಸ್ತಿಯ ತೆರಿಗೆ ರಿಜಿಸ್ಟರ್ ನ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು. |
| 2. | ಮಾಹಿತಿ ಹಕ್ಕು ಕಾಯಿದೆಯಡಿ ಕೌಶಿಕ ಗ್ರಾಮ ಪಂಚಾಯಿತಿಯವರಿಗೆ ದಾಖಲೆಗಳನ್ನು ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 10 ಎಂದು ಗುರುತಿಸಲಾಯಿತು. |
| 3. | ಪಿ ಡಿ ಓ ಕೌಶಿಕ ಗ್ರಾಮ ಪಂಚಾಯಿಯವರಿಗೆ ನೀಡಿದ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 11 ಎಂದು ಗುರುತಿಸಲಾಯಿತು. |
| 4. | ಅಂಚೆ ರಶೀದಿ ಮತ್ತು ಪೋಸ್ಟಲ್ ಆರ್ಡರನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 12 ಮತ್ತು 13 ಎಂದು ಗುರುತಿಸಲಾಯಿತು. |
| 5. | ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 14 ಎಂದು ಗುರುತಿಸಲಾಯಿತು. |

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ

**ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ** ಪ್ರತಿವಾದಿಗಳ ವಿರುದ್ಧ ಏಕಪಕ್ಷೀಯ ಆದೇಶವಾಗಿರುವುದರಿಂದ ಪಾಟೀಸವಾಲು ಏನೂ ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿ ಮುದ್ರಿಸಲಾಗಿದೆ .)

ಸಾ.ಓ.ಹೇ.ಕೇ.ಸ.ಇ.ಎಂ.ಒ.

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಹಾಸನ